ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಉಪ ವಿದ್ಯುತ್ ಪರಿವೀಕ್ಷಕರ ಕಛೇರಿ
ಬಂದೀಗೌಡ ಬಡಾವಣೆ, ಎಲ್.ಐ.ಸಿ. ಹಿಂಭಾಗ
ಮಂಡ್ಯ - 571 401

ಉಪ ವಿದ್ಯುತ್ ಪರಿವೀಕ್ಷಕರಕಚೇರಿ,
ಮಂಡ್ಯ ಉಪ ವಿಭಾಗ,
ಬಂದೀಗೌಡ ಬಡಾವಣೆ,
ಮಂಡ್ಯ 571 401.

****************************************************************************************

**ಮಾಹಿತಿ ಹಕ್ಕು ಅಧಿನಿಯಮ, 2005 ರ ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಪ್ರಕಟಿಸಬೇಕಾದಂತಹ ಮಾಹಿತಿ**

1. **ಸಂಸ್ಥೆಯ ಧ್ಯೇಯೋದ್ಧೇಶ ಮತ್ತು ಕಾರ್ಯಗಳು:**

ಉಪ ವಿದ್ಯುತ್ ಪರಿವೀಕ್ಷಣಾಲಯದ ಕಛೇರಿಯು ಮಂಡ್ಯದಲ್ಲಿದ್ದು, ಉಪ ವಿದ್ಯುತ್ ಪರಿವೀಕ್ಷಕರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಸದರಿ ಉಪ ವಿಭಾಗ ಕಛೇರಿಗೆ ಮಂಡ್ಯ ಜಿಲ್ಲೆಯ ಕ್ಷೇತ್ರದಲ್ಲಿರುವ ವಿದ್ಯುತ್ ಸ್ಥಾವರಗಳು ಬರುತ್ತವೆ. (ಅಂದರೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಪ್ರದೇಶ).

ಸದರಿ ಕಚೇರಿಯು ಖಾಸಗಿ ಕಟ್ಟಡದಲ್ಲಿದ್ದು,
ಎಲ್ಐಸಿ ಕಟ್ಟಡದ ಹಿಂಭಾಗ, ಬಂದೀಗೌಡ ಬಡಾವಣೆ, ಮಂಡ್ಯ-571 401. ಇಲ್ಲಿ ಇರುತ್ತದೆ.

ಸದರಿ ಕಚೇರಿಯಲ್ಲಿ ಪರಿವೀಕ್ಷಣಾಧಿಕಾರಿಗಳು ಮತ್ತು ಲೆಕ್ಕಪತ್ರದ ವರ್ಗದವರು ಕಾರ್ಯನಿರ್ವಹಿಸುತ್ತಾರೆ.

ಸದರಿ ಕಚೇರಿಯಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಒಬ್ಬರು ಉಪ ವಿದ್ಯುತ್ ಪರಿವೀಕ್ಷಕರು ಮಂಡ್ಯ ಉಪ-ವಿಭಾಗೀಯ ಅಧಿಕಾರಿಯಾಗಿ ಹಾಗೂ ಒಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು(ಕ್ಷೇತ್ರೀಯ) ಇರುತ್ತಾರೆ. ಆಡಳಿತಾತ್ಮಕ ವಿಷಯವಾಗಿ, ಒಬ್ಬರು ಪ್ರಥಮ ದರ್ಜೆ ಸಹಾಯಕರು, ಮತ್ತು ಒಬ್ಬರು ದ್ವಿತೀಯ ದರ್ಜೆ ಸಹಾಯಕರುಗಳ ಹುದ್ದೆಯು ಸರ್ಕಾರದಿಂದ ನೇಮಕವಾಗಿದೆ.

ಈ ಕಚೇರಿಯ ಮುಖ್ಯ ಕಾರ್ಯೋದ್ಧೇಶವು ವಲಯದ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು ಸುಸ್ಥಿತಿಯಲ್ಲಿರಲು ಮತ್ತು ಮಾನವರಿಗೆ, ಪ್ರಾಣಿಗಳಿಗೆ ಮತ್ತು ಆಸ್ತಿಗೆ ವಿದ್ಯುತ್ತಿನಿಂದ ಯಾವುದೇ ಹಾನಿ ಆಗದಂತೆ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳುವುದಾಗಿರುತ್ತದೆ. ಸದರಿ ವಿಷಯಗಳನ್ನು ಸಾಧಿಸಲು ಕೆಳಕಾಣಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ.

ಅ) ಡಿ.ಒ.ಪಿ. ಗೆ ಅನುಗುಣವಾಗಿ ಕೆ.ಪಿ.ಟಿ.ಸಿ.ಎಲ್. ಮತ್ತು ವಿದ್ಯುತ್ ಸರಬರಾಜು ಕಂ. ಗಳ ವಿದ್ಯುತ್ ಸ್ಥಾವರಗಳ ಮತ್ತು ಗ್ರಾಹಕರಿಗೆ ಸೇರಿದಂತಹ ಹೆಚ್.ಟಿ./ಎಲ್.ಟಿ. ಸ್ಥಾವರಗಳು, ವಿದ್ಯುತ್ ಜನಕಗಳು, ಬಹುಮಹಡಿ ಕಟ್ಟಡಗಳು, ಲಿಫ್ಟ್‌ಗಳು, ಮತ್ತು ಎಸ್ಕಲೇಟರ್‌ಗಳು, ಕ್ಷ-ಕಿರಣ, ಸಿನಿಮಾ ಮತ್ತು ನಿಯಾನ್ ಸೈನ್ ವಿದ್ಯುತ್ ಸ್ಥಾವರಗಳ ನೀಲಿನಕ್ಷೆ ಪರಿಶೀಲನೆ ಮತ್ತು ಅನುಮೋದನೆ.

ಆ) ಡಿ.ಒ.ಪಿ. ಗೆ ಅನುಗುಣವಾಗಿ ಮೇಲ್ಕಂಡ ವಿದ್ಯುತ್ ಸ್ಥಾವರಗಳ ಪ್ರಥಮ ಪರಿವೀಕ್ಷಣೆ ಕೈಗೊಂಡು ಸುರಕ್ಷತೆಯ ಪ್ರಮಾಣವನ್ನು ಪರಿಶೀಲಿಸಿ ಚಾಲನಾ ಅನುಮೋದನೆ ನೀಡುವುದು.

ಇ) ಡಿ.ಒ.ಪಿ. ಗೆ ಅನುಗುಣವಾಗಿ ಸದರಿ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.

ಈ) ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಅಪಘಾತಗಳ ತನಿಖೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಉ) ಮಂಡ್ಯ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಪರ್ಯವೇಕ್ಷಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿ (ಹೊಸದು ಮತ್ತು ನವೀಕರಣ) ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲಿಸಿ ಅವುಗಳನ್ನು ಸದಸ್ಯ ಕಾರ್ಯದರ್ಶಿಗಳು, ಎಲ್.ಎ. ಅಂಡ್ ಇ.ಬಿ., ಬೆಂಗಳೂರು ಇವರಿಗೆ ಕಳುಹಿಸಿಕೊಡುವುದು.

ಊ) ಮಂಡ್ಯ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಪರ್ಯವೇಕ್ಷಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿಗಳಿಗೆ ಹಿಂಬರಹ ಮಾಡುವುದು.

ಉಪ ವಿದ್ಯುತ್ ಪರಿವೀಕ್ಷಕರು
ಮಂಡ್ಯ

2. <u>ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು:</u>

ಅ) <u>ಉಪ ವಿದ್ಯುತ್ ಪರಿವೀಕ್ಷಕರು,</u>

ಉಪ ವಿದ್ಯುತ್ ಪರಿವೀಕ್ಷಕರರು ಕಛೇರಿ ಮುಖ್ಯಸ್ಥರಾಗಿರುತ್ತಾರೆ. ಇವರು ಡಿ.ಒ.ಪಿ. ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಅವರ ಕಾರ್ಯವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಧಿಕಾರಿಗಳಿಗೆ ಅಗತ್ಯವಿದ್ದಾಗ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಆ) <u>ಸಹಾಯಕ ವಿದ್ಯುತ್ ಪರಿವೀಕ್ಷಕರು(ಕ್ಷೇತ್ರೀಯ):</u>

ಇವರು ಡಿ.ಒ.ಪಿ. ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಅವರ ಕಾರ್ಯವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮತ್ತು ಮೇಲಾಧಿಕಾರಿಗಳಿಗೆ ಅಗತ್ಯವಿದ್ದಾಗ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಇ) <u>ಪ್ರಥಮ ದರ್ಜೆ ಸಹಾಯಕರು:</u>

ನಿಯಮಗಳನುಸಾರ ಎಲ್ಲಾ ತರಹದ ಬಿಲ್ಲುಗಳನ್ನು ತಯಾರಿಸಿ ಕಚೇರಿಯ ಮುಖ್ಯಸ್ಥರಿಗೆ ಸಲ್ಲಿಸುವುದು. ಕ್ಯಾಶ್ ಪುಸ್ತಕ ಮತ್ತು ಇತರೆ ಸಂಬಂಧಿಸಿದ ಪುಸ್ತಕಗಳನ್ನು ನಿರ್ವಹಿಸುವುದು. ಮಂಡ್ಯ ಜಿಲ್ಲೆಯ ಹೊಸ ಹಾಗೂ ನವೀಕರಣಕ್ಕಾಗಿ ಬರುವಂತಹ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ಪತ್ರಗಳ ಅರ್ಜಿಗಳನ್ನು ಪರಿಶೀಲಿಸಿ ಉಪ ವಿದ್ಯುತ್ ಪರಿವೀಕ್ಷಕರಿಗೆ ಮಂಡಿಸುವುದು. ಎಲ್ಲಾ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ನಿರ್ವಹಿಸುವುದು ಹಾಗೂ ಮೇಲಧಿಕಾರಿಗಳು ಸೂಚಿಸುವ ಇತರೆ ಕಛೇರಿ ಕೆಲಸಗಳನ್ನು ನಿರ್ವಹಿಸುವುದು.

ಈ) <u>ದ್ವಿತೀಯ ದರ್ಜೆ ಸಹಾಯಕರು:</u>

ಕಚೇರಿಗೆ ಬರುವ ಎಲ್ಲಾ ಕಡತ/ಅರ್ಜಿಗಳ ಸ್ವಿಕೃತಿ ಮತ್ತು ರವಾನೆ ಮಾಡುವುದು, ಎಲ್ಲಾ ಐ.ಪಿ.ಪಿ., ಸಿ.ಪಿ.ಪಿ.ಗಳು ಸಲ್ಲಿಸುವ 'ಜಿ' ನಮೂನೆಗಳನ್ನು ನಿರ್ವಹಿಸಿ ಸಂಬಂಧಿಸಿದ ಪುಸ್ತಕಗಳಲ್ಲಿ ನಮೂದಿಸುವುದು, ನಮೂನೆ-3 ಅನ್ನು ಸಿದ್ದಪಡಿಸಿ ಉ.ವಿ.ಪ. ರಿಗೆ ಒಪ್ಪಿಸುವುದು, ಅಂಚೆ ಚೀಟಿಗಳ ಲೆಕ್ಕಗಳ ನಿರ್ವಹಣೆ. ಸ್ವೀಕೃತಗೊಂಡ ಕಡತಗಳನ್ನು ಆಯಾ ಅಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು

ಉ) <u>ಸಹಾಯಕರು:</u>

ಅಧಿಕಾರಿಗಳ ಪರಿವೀಕ್ಷಣೆಯಲ್ಲಿ ಸಹಾಯ ಮಾಡುವುದು ಮತ್ತು ಕಡತಗಳನ್ನು ನಿರ್ವಹಣೆ ಮಾಡುವುದು.

ಊ) <u>ಜವಾನ</u>

ಕಚೇರಿಯ ಶುಚಿತ್ವವನ್ನು ಕಾಪಾಡುವುದು, ಸ್ಥಳೀಯ ಟಪಾಲುಗಳನ್ನು ವಿತರಿಸುವುದು, ಖಜಾನೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದು, ಕಡತಗಳನ್ನು ನಿರ್ವಹಣೆ ಮಾಡುವುದು ಮತ್ತು ಕಚೇರಿಯ ಮುಖ್ಯಸ್ಥರು ನಿಗದಿಪಡಿಸಿದ ಕೆಲಸಗಳನ್ನು ನಿರ್ವಹಿಸುವುದು,

3. <u>ಕಚೇರಿ ಕೆಲಸ ಕಾರ್ಯಗಳ ನಿರ್ವಹಣೆಯ ಪದ್ಧತಿ ಮತ್ತು ನಿರ್ಣಯದ ಅಧಿಕಾರ:</u>

ಡಿ.ಒ.ಪಿ. ಪ್ರಕಾರ ನಕ್ಷೆ ಅನುಮೋದನೆಗೆ ಮತ್ತು ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಅನುಮೋದನೆಗೆ ಸಲ್ಲಿಸಿದಂತಹ ಅರ್ಜಿಗಳನ್ನು ಪರಿಶೀಲಿಸುವುದು. ಸಂಬಂಧಿಸಿದ ಅಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ ನ್ಯೂನತೆಗಳೇನಾದರೂ ಇದ್ದಲ್ಲಿ ಅರ್ಜಿದಾರರಿಗೆ ತಿಳಿಸುವುದು. ಅರ್ಜಿ ಸರಿ ಇದ್ದಲ್ಲಿ ನಕ್ಷೆ ಅನುಮೋದನೆ ಅಥವಾ ವಿದ್ಯುತ್ ಸ್ಥಾವರದ ಪರಿವೀಕ್ಷಣೆ ಮತ್ತು ಅನುಮೋದನೆಗೆ ಕ್ರಮ ಕೈಗೊಳ್ಳುವುದು. ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ಮಾಡಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ವಿದ್ಯುತ್ ಸ್ಥಾವರದ ಮಾಲೀಕರಿಗೆ ಸೂಚಿಸುವುದು.

4. <u>ಕೆಲಸ ನಿರ್ವಹಿಸಲು ಇಲಾಖೆಯು ಸೃಜನೆ ಮಾಡಿಕೊಂಡಿರುವ ಪದ್ಧತಿಗಳು:</u>

ಕಚೇರಿ ಕಾರ್ಯ ವಿಧಾನ ಕೈಪಿಡಿಯಲ್ಲಿ ತಿಳಿಸಿರುವಂತೆ ಕಛೇರಿಯ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದು. ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ, ಪರಿವೀಕ್ಷಣೆ ಮತ್ತು ಅಂತಿಮ ಅನುಮೋದನೆ ಇವುಗಳನ್ನು ಇಲಾಖೆಯ ಪರಿವೀಕ್ಷಣಾ ಕೈಪಿಡಿಯಲ್ಲಿ ಸೂಚಿಸಿದಂತೆ ಮಾಡುವುದು. ತೆರಿಗೆ ಕೈಪಿಡಿಯನ್ವಯ ವಿದ್ಯುತ್ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳುವುದು ಮತ್ತು ಲಿಫ್ಟ್ ವಿದ್ಯುತ್ ಸ್ಥಾವರಗಳನ್ನು ಲಿಫ್ಟ್ ಕಾಯ್ದೆ ಮತ್ತು ನಿಯಮಗಳ ಅನ್ವಯ ಪರಿವೀಕ್ಷಣೆ ಮಾಡುವುದು. ಕರ್ನಾಟಕ ಸಿನಿಮಾ ನಿಯಮಗಳ ಅನ್ವಯ ಸಿನಿಮಾ ವಿದ್ಯುತ್ ಸ್ಥಾವರಗಳ

ಉಪ ವಿದ್ಯುತ್ ಪರಿವೀಕ್ಷಕರು
ಮಂಡ್ಯ

ಪರಿವೀಕ್ಷಣೆ ಮಾಡುವುದು. ಅಲ್ಲದೆ ಇಲಾಖಾ ಮುಖ್ಯಸ್ಥರು ಸುತ್ತೋಲೆಗಳ ಮುಖಾಂತರ ತಿಳಿಸುವಂತೆ ಕರ್ತವ್ಯಗಳನ್ನು ನಿರ್ವಹಿಸುವುದು.

5. ಇಲಾಖೆಯ ಕಾರ್ಯ ಸಾಧನೆ ಮಾಡಲು ಇಲಾಖೆಯ ಸುಪರ್ದಿಯಲ್ಲಿರುವ, ಉಪಯೋಗಿಸಲಾಗುತ್ತಿರುವ ಅಥವಾ ಇಲಾಖೆಯ ಅಡಿಯಲ್ಲಿ ಬಳಸಲಾಗುತ್ತಿರುವ ನಿಯಮಗಳು, ಕಾನೂನು, ಆದೇಶಗಳು, ಕಾಯಿದೆಗಳು, ಕೈಪಿಡಿಗಳು ಇತ್ಯಾದಿ:

ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958.
ಆ) ಕೆ.ಎಫ್.ಸಿ. 1958.
ಇ) ಕೆ.ಟಿ.ಸಿ.
ಈ) ಎಂ.ಸಿ.ಇ.
ಉ) ಕಚೇರಿ ಕಾರ್ಯ ವಿಧಾನ ಕೈಪಿಡಿ.
ಊ) ಕೆ.ಸಿ.ಎಸ್ (ಸಿಸಿಎ) ನಿಯಮಗಳು – 1957.
ಋ) ಕೆ.ಸಿ.ಎಸ್ (ಕಂಡಕ್ಟ್) ನಿಯಮಗಳು– 1966.
ಎ) ಭಾರತೀಯ ವಿದ್ಯುತ್ ಕಾಯ್ದೆ – 2003.
ಏ) ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ರೆಗ್ಯುಲೇಶನ್ಸ್, 2010.
ಐ) ಕರ್ನಾಟಕ ಲಿಫ್ಟ್ ಕಾಯ್ದೆ, 2012 ಮತ್ತು ನಿಯಮಗಳು – 2015.
ಒ) ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
ಓ) ಕರ್ನಾಟಕ ವಿ ಸಿ ಆರ್ ಆರ್ ನಿಯಮಗಳು– 1984.
ಔ) ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಪರವಾನಿಗೆ ಮತ್ತು ವಿದ್ಯುತ್ ಪರ್ಯವೇಕ್ಷಕರ ಮತ್ತು ತಂತಿ ಕೆಲಸಗಾರರ ರಹದಾರಿ ನೀಡುವಿಕೆ ನಿಯಮಗಳು – 2012.
ಕ) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆಯ ಅಥವಾ ಮಾರಾಟದ ಮೇಲಣ ತೆರಿಗೆ ಕಾಯ್ದೆ – 1959 ಮತ್ತು ನಿಯಮಗಳು – 2014.
ಕಿ) ನ್ಯಾಷನಲ್ ಎಲೆಕ್ಟ್ರಿಕ್ ಕೋಡ್
ಖ) ವಿದ್ಯುತ್ ಪರಿವೀಕ್ಷಣಾ ಕೈಪಿಡಿ ಮತ್ತು ವಿದ್ಯುತ್ ತೆರಿಗೆ ಕೈಪಿಡಿ.

6. ಕಛೇರಿಯ ಅಧಿನದಲ್ಲಿರುವ ಅಥವಾ ಸುಪರ್ದಿಯಲ್ಲಿರುವ ದಾಖಲಾತಿಗಳು:

ಆಡಳಿತ ಶಾಖೆ:

ಅ) ಸೇವಾ ಪುಸ್ತಕಗಳು.
ಆ) ವೇತನ ಮತ್ತು ಪ್ರಯಾಣ ಭತ್ಯೆ ವಹಿ.
ಇ) ಬಿಲ್ ವಹಿ.
ಈ) ನಗದು ಪುಸ್ತಕ.
ಉ) ಕಚೇರಿ ಖರ್ಚು ವೆಚ್ಚದ ಕ್ರೋಢಿಕೃತ ವಹಿ
ಊ) ರಸೀದಿ ಪುಸ್ತಕ.
ಋ) ಡಿ.ಡಿ., ಚೆಕ್ ಮತ್ತು ಹಣ ರವಾನೆ ವಹಿ.
ಎ) ವೋಚರ್ ಕಡತ.
ಏ) ಸ್ವೀಕೃತಿ ಮತ್ತು ರವಾನೆ ವಹಿ.
ಐ) ವಿದ್ಯುತ್ ತೆರಿಗೆ ವಹಿ.
ಒ) ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಹಿ.
ಓ) ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ವಹಿ.
ಔ) ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ಪರೀಕ್ಷಾ ವಹಿ.
ಕ) ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ಹಿಂಬರಹದ ವಹಿ.



ಉಪ ವಿದ್ಯುತ್ ಪರಿವೀಕ್ಷಕರು
ಮಂಡ್ಯ

ತಾಂತ್ರಿಕ ವಿಭಾಗ:

ಅ) ನೀಲಿ ನಕ್ಷೆ ಅನುಮೋದನೆ ವಹಿ.

ಆ) ವಿದ್ಯುತ್ ಸ್ಥಾವರಗಳ ಅನುಮೋದನೆ ವಹಿ.

ಇ) ವಿದ್ಯುತ್ ಅಪಘಾತಗಳ ತನಿಖಾ ವರದಿ ವಹಿ.

ಈ) ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣಾ ವಹಿ.

7. ಅನ್ವಯಿಸುವುದಿಲ್ಲ.

8. ಇಲ್ಲ.

9. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮಾಹಿತಿ ಸೂಚಿ :-

| ಕ್ರ. ಸಂ. | ಹುದ್ದೆ | ಹೆಸರು ಶ್ರೀ/ಶ್ರೀಮತಿ/ಕುಮಾರಿ | ದೂರವಾಣಿ |
|---|---|---|---|
| 1 | ಉಪ ವಿದ್ಯುತ್ ಪರಿವೀಕ್ಷಕರು, ಮಂಡ್ಯ | ಖಾಲಿ | 08232220611 |
| 2 | ಸಹಾಯಕ ವಿದ್ಯುತ್ ಪರಿವೀಕ್ಷಕರು, ಮಂಡ್ಯ-1, ಮಂಡ್ಯ. | ಸಿದ್ದರಾಜು ಜಿ | 08232220611 |
| 3 | ಸಹಾಯಕ ವಿದ್ಯುತ್ ಪರಿವೀಕ್ಷಕರು, ಮಂಡ್ಯ-2, ಮಂಡ್ಯ. | ಖಾಲಿ | 08232220611 |
| 4 | ಪ್ರ. ದ. ಸ. | ಎಂ ಇ ನಾಗೇಶ್ | 08232220611 |
| 5 | ದ್ವಿ. ದ. ಸ. | ಖಾಲಿ | 08232220611 |
| 6 | ಸಹಾಯಕರು | ಖಾಲಿ | 08232220611 |
| 7 | ಗ್ರೂಪ್ 'ಡಿ' ಜವಾನ | ಖಾಲಿ | 08232220611 |

10. ಅಧಿಕಾರಿಗಳ ಮತ್ತು ಸಿಬ್ಬಂದಿ ಸ್ವಿಕರಿಸುತ್ತಿರುವ ವೇತನ :

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾದ ಸಿಬ್ಬಂದಿ | ವೇತನ ಶ್ರೇಣಿ |
|---|---|---|---|
| 1 | ಉಪ ವಿದ್ಯುತ್ ಪರಿವೀಕ್ಷಕರು | 1 | 52650-1250-53900-1450-62600-1650-72500-1900-83900-2200-97100 |
| 2 | ಸಹಾಯಕ ವಿದ್ಯುತ್ ಪರಿವೀಕ್ಷಕರು | 2 | 43100-1100-46400-1250-53900-1450-62600-1650-72500-1900- 83900 |
| 3 | ಪ್ರ ದ ಸ | 1 | 27650-650-29600-750-32600-850-36000-950-39800-1100-46400-1250-52650 |
| 4 | ದ್ವಿ ದ ಸ | 1 | 21400-500-22400-550-24600-600-27000-650-29600-750-32600-850-36000-950-39800-1100-42000 |
| 5 | ಸಹಾಯಕರು | 1 | 18600-450-20400-500-22400-550-24600-600-27000-650-29600-750-32600 |
| 6 | ಗ್ರೂಪ್ 'ಡಿ' ಜವಾನ | 1 | 17000-400-18600-450-20400-500-22400-550-24600-600-27000-650-28950 |
| | ಒಟ್ಟು | 7 | |



ಉಪ ವಿದ್ಯುತ್ ಪರಿವೀಕ್ಷಕರು
ಮಂಡ್ಯ

11. ಅನ್ವಯಿಸುವುದಿಲ್ಲ.

12. ಅನ್ವಯಿಸುವುದಿಲ್ಲ.

13. ಅನ್ವಯಿಸುವುದಿಲ್ಲ.

14. 4(1)(ಎ) ಪ್ರಕಟಿಸಲಾಗಿದೆ ಮತ್ತು 4(1)(ಬಿ) ವಿದ್ಯುನ್ಮಾನ ರೂಪದಲ್ಲಿ ಲಭ್ಯವಿದೆ ಮೊದಲು ವಿನಂತಿಯಲ್ಲಿ ವಿಕ್ಷೀಸುವುದಕ್ಕೆ.

15. ಇಲ್ಲ.

16. <u>ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ವಿಳಾಸ ಮತ್ತಿತರ ವಿವರ:</u>

| ಕ್ರ. ಸಂ. | ಹೆಸರು (ಶ್ರೀ / ಶ್ರೀಮತಿ / ಕುಮಾರ / ಕುಮಾರಿ) | ಅಧಿಕಾರಿಯ ಹುದ್ದೆ | ಮಾಹಿತಿ ಹಕ್ಕು 2005 ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ, |
|---|---|---|---|
| 1 | ಸಿದ್ದರಾಜು. ಜಿ | ಸಹಾಯಕ ವಿದ್ಯುತ್ ಪರಿವೀಕ್ಷಕರು-1, ಮಂಡ್ಯ. | ಮಂಡ್ಯ ಜಿಲ್ಲೆಯ ಉವಿಪ ಮತ್ತು ಸವಿಪ ರವರ ತಾಂತ್ರಿಕ ಅಧಿಕಾರ ಪ್ರತ್ಯಾಯೋಜನೆ ಅಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ ಹಾಗೂ ಕಚೇರಿಯ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಪಟ್ಟಂತೆ. |

17. ಯಾವುದೇ ವಿಷಯದ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಪ್ರತಿ ವರ್ಷ ಈ ಮಾಹಿತಿಗಳನ್ನು ನವೀಕರಿಸಲು ವ್ಯವಸ್ಥೆ ಮಾಡಲಾಗಿದೆ.

<u>ಗಮನಿಸಿ:</u> ಪರಿವೀಕ್ಷಣಾಧಿಕಾರಿಗಳಿಗೆ ಡಿ.ಓ.ಪಿ. (ಸರ್ಕಾರದ ಆದೇಶ ಸಂ. ಇ.ಎನ್ 5 ಇ.ಐ.ಎಸ್ 2012 ದಿ: 12-09-2013) ಕಚೇರಿಯಲ್ಲಿ ಲಭ್ಯವಿರುತ್ತದೆ ಅತವಾ ಇಲಾಖಾ ವೆಬ್ ವಿಳಾಸ: **http//www.ksei.gov.in** ಇಲ್ಲಿಯೂ ಲಭ್ಯವಿರುತ್ತದೆ

ಮೊದಲನೆ ಅಪೀಲು ಅಧಿಕಾರಿ ಹೆಸರು ಮತ್ತು ಹುದ್ದೆ:
ಶ್ರೀ ಸಿದ್ದರಾಜು. ಜಿ.
ಉಪ ವಿದ್ಯುತ್ ಪರಿವೀಕ್ಷಕರು(ಪ್ರಭಾರ),
ಮಂಡ್ಯ

Sd/- 14/12/18
f/c ಉಪ ವಿದ್ಯುತ್ ಪರಿವೀಕ್ಷಕರು
ಉಪ ವಿದ್ಯುತ್ ಪರಿವೀಕ್ಷಕರು
ಮಂಡ್ಯ

---

ಮೆಮೊ ಸಂಖ್ಯೆ: ಉವಿಪ/ಮಂಡ್ಯ/ಆರ್‌ಟಿಐ/1325-26/2018-19/ ದಿನಾಂಕ: 14.12.2018

ಪ್ರತಿ:

1. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ರವರ ಘನ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಸೂರು ರವರ ಘನ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮಾಹಿತಿಗಾಗಿ.
4. ಕ.ಕ ಮತ್ತು ಮು.ಕ